ಆ ಗುಂಪಿನೊಡನೆ ರಾತ್ರಿಯಿಡೀ ಅಲ್ಲಿಯೇ ಕಳೆದುಬಿಡುತ್ತಿದ್ದ. ಹೊನ್ನಟ್ಟಾಲಯ್ಯನಿಗೆ ಮನೆಯಲ್ಲಿ ಮಲಗುವುದು ಅಲ್ಲಿ ಮಲಗುವುದು ಎರಡೂ ಒಂದೇ ಆಗಿತ್ತು. ಏಕೆಂದರೆ, ಹೊನ್ನಟ್ಟಾಲಯ್ಯ ಮದುವೆ ಆಗುತ್ತೇನೆ ಅಂತ ಹೇಳುತ್ತಲೇ ತನ್ನ ವಾರಿಗೆಯವರೆಲ್ಲಾ ಮದುವೆಯಾಗಿ ಅವರ ಮಕ್ಕಳು ಮದುವೆಗೆ ಬಂದರೂ ಅವನು ಮಾತ್ರ ಹಾಗೇ ಉಳಿದಿದ್ದ. ಹೊನ್ನಟ್ಟಾಲಯ್ಯನ ಅವ್ವ ಸಂಕವ್ವ ಇದೇ ಕೊರಗಿನಲ್ಲಿ ಕೊನೆಯುಸಿರೆಳೆದಿದ್ದಳು. ಹಂಗಾಗಿ ಆಗಲೋ ಈಗಲೋ ಬಿದ್ದು ಹೋಗುವಂತಾಗಿದ್ದ ಮಾಳಿಗೆಯ ಮನೆಗೆ ಹೊನ್ನಟ್ಟಾಲಯ್ಯ ಅಪರೂಪದ ನೆಂಟನಾಗಿದ್ದ. ಅಡವಪ್ಪನಿಗೆ ಬೆಂಬಿಡದ ಭಂಟನಾಗಿದ್ದ.

ಹೊನ್ನಟ್ಟಾಲಯ್ಯ ತಾನಿಡಿದಿದ್ದ ಜಾಡಿನಿಂದ ಬಡಗಲ ದಿಕ್ಕಿಗೆ ಹರಿದಿದ್ದ ಮತ್ತೊಂದು ಕಾಲಾದಿ ಹಿಡಿದು ಅದರ ಇಳುಕಲಿನಲ್ಲಿ ಇಳಿಯುತ್ತಾ ಅಲ್ಲಿನ ಇರ್ವಕ್ಕಲಲ್ಲೂ ಇದ್ದ ಬೇಟೆ ತರಾದ ತಂಗಡೆ ಇತರೆ ಕತರಾದ ಗಿಡಗಳ ಬುಡದಲ್ಲಿ ಕದ್ದು ಬೆಳೆಸಿದ್ದ ಭಂಗಿಸೊಪ್ಪಿನ ಗಿಡಗಳನ್ನು ಬ್ಯಾಟರಿ ಬೆಳಕಿನಲ್ಲೊಮ್ಮೆ ಖಾತ್ರಿಮಾಡಿಕೊಳ್ಳುತ್ತಾ ಅವುಗಳ ಘಮಲನ್ನು ಮೂಗಿಗೇರಿಸಿಕೊಳ್ಳುತ್ತಾ ಸಾಗುತ್ತಿದ್ದ. ಇನ್ನೇನು ಒಂದತ್ತು ಹೆಜ್ಜೆ ಹಾಕಿದರೆ ಮಂಟಪ ಸಿಕ್ಕಿ ಬಿಡುತ್ತೆ ಅನ್ನುವಾಗ ಪಾಳು ಮಂಟಪದ ಕಡೆಯಿಂದ ಎಂದಿನಂತೆ ಮಣಗುಟ್ಟುವ ದೀಪಗಳ ಬೆಳಕಿನ ಬದಲು ಫಳಾರಿಸುತ್ತಿದ್ದ ಬೆಳಕನ್ನು ಕಾಣುತ್ತಲೇ ಅಚ್ಚರಿಗೊಂಡಿದ್ದ. ಸದ್ದಾಗದಂತೆ ಮೆಲ್ಲಗೆ ನಡೆದು ಪಾಳು ಮಂಟಪದಿಂದ ಕೊಂಚ ದೂರದಲ್ಲಿದ್ದ ಪೊದೆಯೊಂದನ್ನು ಮರೆಮಾಡಿಕೊಂಡು ಕೂತು ಇಣುಕಿದ್ದ. ತನ್ನ ಮದ್ದಿಸ್ವ ಕಣ್ಣುಗಳಿಗೆ ಹಾಕಿಕೊಂಡಿದ್ದ ದಪ್ಪ ಗಾಜಿನ ಕನ್ನಡಕದೊಳಗಿಂದ ಅಲ್ಲಿನದು ಸ್ಪಷ್ಟವಾಗಿ ಕಾಣದೇ ಹೋದರೂ ಅಲ್ಲಿನ ಸದ್ದು ಮಾತ್ರ ಕಿವಿಗೆ ಗುದ್ದುತ್ತಿತ್ತು. ಯಾವತ್ತೂ ಅಲ್ಲಿ ಅದೂ ಆ ಹೊತ್ತಿನಲ್ಲಿ ಅನಾಡಿ ಗಲಾಟೆ ಕಂಡವನೇ ಅಲ್ಲ. ಆ ಸದ್ದಿನೊಳಗೆ ಕೆಲವು ಹೆಣ್ಣು ದನಿಗಳು ಇರುವುದೂ ಕಿವಿಗೆ ಬೀಳುತ್ತಲೇ ಚುರುಕಾಗಿದ್ದ ಹೊನ್ನಟ್ಟಾಲಯ್ಯ ಕೂತಿದ್ದವನು ಎದ್ದು ಅಲ್ಲಿನ ಮುಖಗಳನ್ನು ಎಟಕಿಸಿಕೊಳ್ಳಲು ಯಣಗಿದ್ದ. ಆದರೆ, ಅಲ್ಲಿನ ಯಾವೊಂದು ಮುಖವೂ ಸ್ಪಷ್ಟವಾಗಿ ಕಾಣದೇಹೋದ ಪ್ರಯುಕ್ತ ಗಿಡಗಳನ್ನು ಮರೆಮಾಡಿಕೊಂಡು ಒಂಚೂರೂ ಸುಳಿವು ಸಿಕ್ಕದಂತೆ ನಡೆದು ಆ ಪಾಳು ಮಂಟಪದ ಎದುರಿಗಿದ್ದ ದೊಡ್ಡ ಆಲದ ಮರದ ಮೋಟೊಂದರ ಮರೆಯಲ್ಲಿ ನಿಂತು ನೋಡಿದವನಿಗೆ ಅಲ್ಲಿ ಕಂಡ ದೃಶ್ಯ ಹೌಹಾರುವಂತೆ ಮಾಡಿತ್ತು.

ಅಲ್ಲಿ ಶಂಭುಲಿಂಗೇಶ್ವರ ಯುವಕರ ಸಂಘಕ್ಕೆ ಸಂಘವೇ ಜಮಾಯಿಸಿತ್ತು. ಈ ಗುಂಪಿನವರೇ ತನ್ನವರನ್ನು ಅಲ್ಲಿಂದ ಓಡಿಸಿದ್ದರೋ ಅಥವಾ ಈ ಗುಂಪನ್ನು ನೋಡುತ್ತಲೇ ಅವರೇ ಅಲ್ಲಿಂದ ಕಾಲ್ಕಿತ್ತಿದ್ದರೋ ಅಂತೂ ಯಾವ ಕಾರಣಕ್ಕೋ ಏನೋ ಅಲ್ಲಿ ತನ್ನ ಗುಂಪಿನ ಯಾರೊಬ್ಬರ ಸುಳಿವೂ ಇರದೇ ಹೋಗಿದ್ದರಿಂದ ಕಸಿವಿಸಿಗೊಂಡರೂ ಆ ಬಗ್ಗೆ ಅಷ್ಟು ತಲೆಕೆಡಿಸಿಕೊಳ್ಳದೆ ಆ ಚಣದ ಘಟನಾವಳಿಗಳಿಗೆ ಸಾಕ್ಷಿಯಾಗಿ ನಿಂತಿದ್ದ. ಅಡವಪ್ಪನ ಮಗ ಶಂಭುಲಿಂಗ ಕೈಯ್ಯಲ್ಲಿ ಹಾರವೊಂದನ್ನು ಹಿಡಿದು ನಿಂತಿದ್ದ. ಅವನ ಪಕ್ಕದಲ್ಲಿ ಖಾಸಿಂ ಸಾಬರ ಮಗಳು ಮುಬೀನಾಳ ಕೈಯ್ಯಲ್ಲೂ ಒಂದು ಹಾರವಿತ್ತು. ಶಂಭುಲಿಂಗನ ಪಕ್ಕ ನಿಂತಿದ್ದ ಸುಂದ್ರೇಶ ಮೇಷ್ಟರು ಪುಸ್ತಕವೊಂದನ್ನು ಹಿಡಿದು ಏನನ್ನೋ ಓದುತ್ತಿದ್ದರು. ಅದನ್ನು ಶಂಭುಲಿಂಗ ಹಾಗೂ ಮುಬೀನಾ ತಿರುಗಿ ಹೇಳುತ್ತಿದ್ದರು. ಹೊನ್ನಟ್ಟಾಲಯ್ಯ ಮತ್ತೂ ಕುತೂಹಲಕ್ಕೆ ಬಿದ್ದು ಮೇಷ್ಟರು ಓದುತ್ತಿರುವುದಾದರೂ ಏನು ಎಂಬುದನ್ನು ಕಿವಿಗಾಕಿಕೊಳ್ಳುವ ಸಲುವಾಗಿ ಮಂಡ ಧೈರ್ಯದಿಂದ ಹಿಂದಾಸಿ ಬಳಸಿಕೊಂಡು ಆ ಗುಂಪಿನ ಹಿಂಬದಿಗೋಗಿ ನಿಂತಿದ್ದ. ಮೇಷ್ಟರು, 'ಎಲ್ಲಾ ಮತ, ಧರ್ಮ, ಕಂದಾಚಾರ, ಅಜ್ಞಾನದಿಂದ ವಿಮುಕ್ತರಾಗಿರುವ ವಧು ವರರೇ, ಮಾನವ ಕೋಟಿಯನ್ನು ನಿಮ್ಮಂತೆಯೇ ವಿಮುಕ್ತರನ್ನಾಗಿ ಮಾಡುವ ಪವಿತ್ರ ಕರ್ತವ್ಯವನ್ನು ನೀವು ಮಾಡಿದ್ದೀರಿ... ಇನ್ನು ನೀವು ಯಾವ ಧರ್ಮಕ್ಕೂ ಸೇರುವ ಅಗತ್ಯವಿಲ್ಲ. ಯಾವುದೇ ಮತಕ್ಕೂ